
ರಾತ್ರಿನೂ ಇರೋರು. ಎಷ್ಟು ಚೆನಾಗೆ ಅನ್ನಿಸ್ತಿತ್ತು. ಎಷ್ಟೆ ಸಾಮಾನುಗಳ್ನ ತಂದಿದ್ರೂ, ಏನೊ ಒಂದು ಕಮ್ಮಿಯಾದ್ರೂ, ಹೋಗೆ ಶಾಂತಮ್ಮಾರ ಮನ್ಯಾಗೆ ಇಸ್ಕಂಬಾ ಅನ್ನೋರು ರಾತ್ರಿ ಗಂಟಿ ಎರಡಾಗ್ಲೀ. ಒಂದಾಗ್ಲೀ ಕುಣ್ಕಂಡು ಹೋಗೊದು.

ಕರಿಗಡ್ಬು, ಕಲಸನ್ನ, ಚಿನ್ನಿಕಾಯಿಗಡುಬು, ಮೊಸ್ರುಬುತ್ತಿ, ಮುಳುಗಾಯಿಪಲ್ಯ, ಮೊಸ್ರುಗಾಯಿ, ಹಪ್ಪಳ, ಕೊಸುಂಬರಿ ಅಯ್ಯಯ್ಯಪ್ಪಾ ಎಷ್ಟೊಂದು ಅಡ್ಗೆಗಳು. ಹನ್ನೊಂದು ಹನ್ನೆರಡಕ್ಕೆ ಬುಟ್ಟಿಯೊಳಗೆ ಎಲ್ಲಾ ಅಡ್ಗೆಗಳ್ನ ಕಟ್ಕೊಂಡು ಗದ್ದೆಗೋಗೋದು. ನಡ್ಕಂಡು ಹೋಗಾಕೆ ಆಗ್ಲಿಲ್ದೋರು ಗಾಡಿ ಕಟ್ಕೊಂಡು ಹೋಗೋರು. ಎಲ್ಲಿಂದ ಎಲ್ಲಿವರೆಗೂ ಬರಿ ಭತ್ತದ ಗದ್ದಿಗುಳು. ಹಚ್ಚಹಸಿರು, ಗಿಡ್ದ ತುಂಬಾ ತೆನೆ ತುಂಬ್ಕಂಡು ಬಾಗಿ ಬೀಸೊ ಗಾಳೀಗೆ ಅಲ್ಲಾಡೋದು. ನೊಡಾಕೆ ಚೆಂದ. ಜೊತ್ಗೆ ಬಿಸ್ಲು ನೆರ್ಳುಗಳ ಆಟದಿಂದ ಗದ್ದಿ ಬಯ್ಲು ಕಣ್ಣಿಗೆ ಹಬ್ಬ ಅನ್ಸೊದು. ಅಡ್ಗಿ ಬುಟ್ಟಿ ಇಳ್ಸಿ ಮೊದ್ಲು ಎರಡು ಭತ್ತದ ಗಿಡ್ದ ತೆನಿಗಳ್ನ ಕಟ್ಟಿ, ಅದರ ಬುಡದಾಗೆ ಮೂರು ಸಣ್ಣ ಕಲ್ಲಿಟ್ಟು, ಸುಣ್ಣ ಹಚ್ಚಿ, ಅರಿಶಿಣ್ನ ಕುಂಕ್ಮ ಹಚ್ಚಿ, ಭತ್ತದ ಗಿಡಕ್ಕೆ ಸರ, ಬಳಿ ಹಾಕಿ ಕಣ ಉಡ್ಸಿ ಮಾಡಿರೊ ಅಡ್ಗಿನ್ನೆಲ್ಲಾ ಎಡೆಯಿಟ್ಟು ಎಲ್ರೂ ಪೂಜೆ ಮಾಡಿ ಬೇಡ್ಕೊಳ್ಳೋರು. ಅಲ್ಲೆ ಬದನ್ಮೇಲೆ ಇಲ್ಲಾ ಮರಯಿದ್ರೆ ಅದರಕ್ಕೆಳಾಗೆ ನೆರಳಾಗೆ ಕುಂತ್ಕಂಡು ಊಟ ಮಾಡೋದು. ಗದ್ದಿ ಬಯಲಾಗೆಲ್ಲಾ ಜನಾಜನ. ಎಲ್ಲಾ ಉಂಡು ಎಲಡಿಕಿ ಹಾಕ್ಕಂಡು ಮನಿಗೆ ಹೊಂಟಾಗ, ಹೋಗೋರು ಬರೋರು ಯಾರು ಸಿಕ್ರೂ ಪಾಡಿದಿರಾ? ಹಬ್ಬ ಆತಾ? ಉಂಡ್ರಾ? ಹಿಂಗೆ ಕೇಳಾದು. ಅಪರೂಪಕ್ಕೆ ತವ್ರುಮನಿಗೆ ಬಂದ ಸುಶೀಲಕ್ಕನ್ನ ನೋಡಿ ನಮ್ಮ ಮಖ ಊರಗಲಾತು. ಸುಶೀಲಕ್ಕಯ್ಯಾ. ಯಾವಾಗ ಬಂದಿ. ಪಾಡಿದಿಯಾ? ಎಷ್ಟ್ ದಿನ ಆತವ್ವ ನಿನ್ನ ನೋಡಿ. ಹಬ್ಬಕ್ಬಂದ್ಯಾ ಮನಿಗೆ ಬಾ, ಹಂಗೆ ಹೋಬ್ಯಾಡ ಅಂತ ಪ್ರೀತಿ ಅನ್ನೋದು ತುಂಬಿ ತುಳ್ಕತಿತ್ತು. ಆಮ್ಯಾಕೆ ಎರಡ್ದಿನ ಹಬ್ಬದಡಿಗೇನೆ ಉಣ್ಣೋದು.

ಸತ್ತಾರ್ ಸಾಬ್ರುದು ಒಂದೆ ಮನಿ ನಮ್ಮೂರಾಗೆ ಅವ್ರುದು ಹಬ್ಬುಗಳ್ಗೆ ಅವರು ಚೌಡಿಬಳಿ ಮಾಡಿಕೊಡೋರು. ಹಂಗದ್ರೆ ಅರಶ್ನ,ಕುಂಕ್ಮಾನ ಕಾಗ್ದದಾಗೆ ಸಣ್ಣಪಟ್ಣ ಮಾಡಿ ಎರಡು ಸಣ್ಣ ಕರಿಬಳಿಗುಳು ಎರಡು ಊದಿನಕಡ್ಡಿ ಸೇರ್ಸಿ ಕೆಂಪುದಾರದಾಗೆ ಕಟ್ಟಿರೋರು. ಜನದ್ದು ಗದ್ದಿಗುಳು, ಮನಿಕಡೆ ನೋಡಿ ಅವ್ರುಗೆ ಎಷ್ಟು ಬೇಕೂಂತ ಅಂದಾಜ್ಮಾಡಿ ಅಷ್ಟು ಚೌಡಿಬಳಿ ಕೊಡೋರು. ಈ ಹಟ್ಟಿಹಬ್ಬ ಬಂದ್ರೆ ಹತ್ತಾರ್ಕಡಿಗೆ ಪೂಜಿ ಮಾಡ್ಬೇಕು ದೇವ್ರು ಕೋಣ್ಯಾಗೆ, ಗಾಡಿಚಕ್ರುಗುಳ್ಗೆ, ಹಕ್ಕಿಮನಿಗೆ, ಗಳೇವಕ್ಕೆ, ಮಾರಮ್ಮಗೆ, ಹನ್ಮಂತದೇವ್ರುಗುಡೀಗೆ ಒಂದಾ ಎರಡಾ, ಅ ಎಲ್ಲಾ ಕಡಿಗೆ. ಪೂಜಾ ಸಾಮಾನು ಒಯ್ಯೊ ಬದ್ಲು ಬಕ್ಕಣ್ಣದಾಗೆ ಕಡ್ಡಿಪಟ್ನ ಇಟ್ಕೊಂಡು ಚೌಡಿಬಳಿಗುಳ್ನ ತೊಗೊಂಡು ಹೋದ್ರೆ ಆತು. ಭತ್ತದ ಗದ್ದಿಗುಳು ಒಕ್ಲಾದಾಗ ಸತ್ತಾರ್ಸಾಬ್ರಿಗೆ ಆಯ ಕೊಡೋರು. ಅವ್ರಿಗೂ ಜೀವನಾತು. ಮತ್ತೆ ಮೊರಂ ಹಬ್ಬಾನ ಇಡಿ ಊರೆ ಸೇರಿ ಮಾಡೋರು. ಹಂಕ್ಲು ಹತ್ರ ಇರೊ


ಶಿಕಾರಿಪುರದ ಉಡುತಡಿಯಲ್ಲಿನ
ಅಕ್ಕಮಹಾದೇವಿ ಪುತ್ಥಳಿ

ಕಣದಾಗೆ ಜಾಗ ಬೇಕಾದಷ್ಟಿತ್ತು. ಅಲ್ಲೆ ದೇವ್ರುಗಳ್ನ ಕುನ್ರಿಸೋರು. ಮುಂದೆ ಓದ್ಕಿಗೆ ಜಾಗ ಬಿಟ್ಟು, ಕೆಂಡ ಮಾಡಾಕೆ ಗುಂಡಿ ತಗಿತಿದ್ರು. ಊರಾಗೆ ಮನಿಗೊಂದು ಕಟ್ಗಿ ಬಡ್ಡಿ ಹಾಕೋರು. ದೊಡ್ಡ ಗುಡ್ಡೆ ಆಗಿ ಸಾಯಂಕಾಲಕ್ಕೆ ಬೆಂಕಿ ಹಾಕೋರು. ಪ್ರತಿ ಮನಿಯಿಂದ ಸಕ್ರಿ, ಉಪ್ಪು ತಗಂಡೋಗಿ, ದೇವ್ರು ಮುಂದೆ ಕುಂತಿರೊ ಮುಲ್ಲಾನಿಗೆ ಸಕ್ರಿ ಕೊಟ್ಟು ಓದ್ಕಿ ಮಾಡಸ್ಕಂಡು, ನವಿಲ್ಗೆರೆ ಕಟ್ನಾಗೆ ಆಶೀರ್ವಾದದಂಗೆ ತಲಿಮ್ಯಾಲೆ ಹೊಡಿಸ್ಕಂಡು, ಉಪ್ಪುನ್ನ ಉರಿಯೊ ಬೆಂಕಿಗೆ ಹಾಕೋದು. ಅದು ಚಟಪಟಾಂತ ಸಿಡಿಯೋದನ್ನು ಸುತ್ತೋರ್ಗೂ ನಿಂತು ನೋಡಿದ್ದೇ ನೋಡೋದು. ನಾಲ್ಕೈದು ಮನೇರು ಒಟ್ಗೆ ಉಪ್ಪಾಕಿದ್ರೆ, ಸಣ್ಣ ಕಿಡಿಗುಳು ಬಾಳ ಮ್ಯಾಕೆ ಸಿಡ್ದು ಬಾರಿ ಚೆಂದ ಇರೋದು. ಮಾರ್ನೆದಿನ ಅಲಿದೇವ್ರು ಮೆರವಣ್ಗೆ. ಮೂರ್ನಾಲ್ಕು ಜನ ಅಲಿದೆವ್ರುನ್ನ ಹಿಡ್ಕೊಂಡು ಸಾಲುಗೆ ನಿಂತಿರೋರು. ಅವ್ರು ಹಿಂದೆ ಜನ. ಮುಂದೆ ಮುಲ್ಲಾ ಮತ್ತೆ ಸಾಂಬ್ರಾಣಿ ಹೊಗೆ ಬರೊ ಕೆಂಡ್ದ ಕುಡ್ಕೆ ಹಿಡ್ಕೊಂಡಿರೋರು. ಜಡ್ಡಿನಕ್ಕ, ಜಡ್ಡಿನಕ್ಕಾಂತ ಹಲ್ಗಿ ಹೊಡಿತಾಯಿದ್ರೆ ಮೈಯೆಲ್ಲಾ ರೋಮಾಂಚನ.

ಕೇರಿ ಕೇರಿಗೆಲ್ಲಾ ಮೆರವಣ್ಗೆ ಹೋಗೋದು. ಹಂಗೆ ಹಲ್ಗಿ ಹೊಡಿತಾಯಿದ್ರೆ, ದೇವ್ರು ಹೊತ್ತರಿಗೆ ಮೈಮ್ಯಾಲೆ ಬಂದುಬಿಡೋದು. ಅದ್ರಾಗೂ ಮಾರುತಣ್ಣಂಗೆ ಪ್ರತಿವರ್ಷ ಮೈಮ್ಯಾಲೆ ಬರೋದು. ಹತ್ಜನ ಹಿಡಿದ್ರೂ ಬಗ್ಸಾಕೆ ಆಗ್ತಿದ್ದಿಲ್ಲ. ಕ್ಯಾ ಹುಸೇನ್ ಕ್ಯಾ ಹುಸೇನ್ ಅಂತ ಜನ ಕೂಗ್ತಾಯಿದ್ರೆ ರೋಷಾವೇಶ ಮುಗ್ಲು ಮುಟ್ತಿತ್ತು. ಸಣ್ಣ ಹುಡ್ರು ಹೆದ್ರುಕ್ಕೊಂಡು. ಮನಿಯೊಳಾಗೆ ಓಟ್ಕೀಳೋರು. ಮಾರತಣ್ಣ ದೇವ್ರುನ್ನ ಕೈಯಾಗೆ ಹಿಡ್ಕೊಂಡು ನೆಲಕ್ಕೆ ಬಗ್ಸೋದು, ಎತ್ಲಾಗಂದ್ರೆ ಅತ್ಲಾಗೆ ನುಗ್ಗಿ ಬಿಡೋದು. ಓಡೋಡಿ ಹೋಗೋದು. ಮನುಷ್ರುಗೆ ಹಂಗೆ ಮಾಡಾಕೆ ಸಾಧ್ಯನೆಯಿಲ್ಲ. ಮಖಕ್ಕೆಲ್ಲಾ ಬಣ್ಣ ಹಚ್ಕೊಂಡು, ಉದ್ದನೇದು ತೋಪಿ, ಸಿಲ್ವರಪೇಂಟಿಂದು ಗುಲ್ಲು ಹಾಕಿರೊ ಕರಿ ಬಟ್ಟೆ ಉಟ್ಕಂಡು ಜಲಾಲಿ ಬರೋದು. ಕೈಯಾಗೆ ನವಿಲ್ಗೆರೆ ಕಟ್ಟು ಹಿಟ್ಕೊಂಡಿರೋದು. ಮನಿಮನಿಗೂ ಬಂದು ನೀಡಿಸ್ಕೊಳ್ಳೋರು. ಹಿಂದೆ ಹುಡ್ರು ಬೆನ್ನತ್ಕಂಡು ಬರೋವು.

‘ಜಲಾಲಿ ಗುಲ್ಲುಗ್ಲಲ್ಲು, ನಾನೂ ಬರ್ತಿನಿ ನಿಲ್ಲಿಲ್ಲು’ ಅಂತ ಕೂಗೋರು ಆವಾಗ ಜಲಾಲಿ ಓಡಿಸ್ಕೊಂಡು ಬರೋದು. ಸಿಕ್ಕೋರಂತೂ ಹೆದ್ರುಕ್ಕಂಡು ಚೀರೋರು. ಜಲಾಲಿ ನವಿಲ್ಗೆರೆ ಕಟ್ನಾಗೆ ತಲೆಗೊಡ್ದು ಬಿಡೋದು. ಉಳ್ದೋರು ತಪ್ಪಸ್ಕೊಂಡು, ಮುಚ್ಚಿಟ್ಕೊಳ್ಳೋರು. ಜಲಾಲಿ ಮುಂದ್ಮುಂದೆ ಹೋಗ್ತಾಯಿದ್ರೆ ಮತ್ತೆ ಹಿಂದ್ಲಿಂದ ಹುಡ್ರು ಹೋಗಿ ಕುಗೋರು.

ಸಣ್ಣೋರಿದ್ದಾಗಂತೂ ಎಷ್ಟು ಚೆಂದಿತ್ತವ್ವ. ಊರೊಳಾಗೆ ಯಾವ್ದೂ ಬ್ಯಾದನೆಯಿಲ್ಲ. ಗೆಳತಿ ಮೈನಾರ ಮನಿಗೋಗೋದು. ಸಾಯಂಕಾಲ್ದಂಕ ಅಲ್ಲೆ ಇರೋದು. ಕೇರಂ ಆಡೋದು, ಹಳೆ ಪುಸ್ತಕಗಳ್ನ ಗುಡ್ಡೆ ಹಾಕ್ಕೊಂಡು ಸುತ್ಲು ಕುಂತ್ಕಂಡು ಓದೋದು. ಮಧ್ಯಾಹ್ನ ಅಲ್ಲೆ ಉಣ್ಣೋದು. ಹಂಗೆ ನಮ್ಮನೀಗೆ ಬಂದಾಗ್ಲೂ. ಸಾರು ಅನ್ನ ಯಾವಾಗ್ಲೂ ಇರೋದು. ದೀಪಾವಳಿಗೆ ಹಟ್ಟಿ ಹಬ್ಬ ನೋಡಾಕಂತ ಓಂಕಾರಣ್ಣಾರ ಮನಿ ಅಟ್ಟದಮ್ಯಾಗೋಗಿ ಜಾಗ ಹಿಡ್ಕಂಡು ಕೂರುತಿದ್ವಿ. ಮನಿ ತುಂಬಾ ಜನ ಓಡಾಡೋರು. ಅವ್ರು ಮನಿ, ಇವ್ರು ಮನಿ ಅನ್ನೋದೆಯಿಲ್ಲ. ಹಸುವಾತಾ ತಟ್ಟಿ ತಗಂಡು ಹೋಳ್ಗಿ ಹಾಕ್ಕಂಡು ಉಣ್ಣೋದು. ನಮ್ಮನಿಯಾಗೆ ರೊಟ್ಟಿಗೆ ಮಾಡಿರೊ ಪಲ್ಲೇವು ಒಲ್ಲೆನ್ನಸಿದ್ರೆ ಇಂದ್ರಕ್ಕಾರ ಮನ್ಯಾಗೆ ಕೋಳಿಸಾರ್ ಮಾಡಿದ್ರು ಅಂತೇಳಿ ದೊಡ್ಡದೊಂದು ಪಾವಿನ್ಲೋಟ ತಗೊಂಡೋಗಿ ಇಸ್ಕಂಬರಾದು ಇಲ್ಲಾಂದ್ರೆ ರೊಟ್ಟೀನ ತಟ್ಟ್ಯಾಗಾಕ್ಕೊಂಡೋಗಿ ಅವ್ರು ಮನಿ ಪಲ್ಲೇವು ಹಾಕ್ಸಿಕ್ಕೊಂಡು ಅಲ್ಲೆ ತಿನ್ನಾದು. ಶಾಲಿಗುಡೀಗೆ ರಜಾ ಬಂದಾಗಂತೂ ಕುಂಟಾಪಿಲ್ಲಿ ಆಡಿದ್ದೇ ಆಡಿದ್ದು. ಅಮಟೆ ಎಸ್, ಅಮಟೆ ಎಸ್ ಬೆಳದಿಂಗಳಾಗೆ ರಾತ್ರೆಯಲ್ಲಾ ಆಡಾನ ಅಂತ ಮಾತಾಡ್ಕಂಡು ಹೊತ್ತಾದಂಗೆ ಒಬ್ಬಬ್ರೆ ಹೋಗೋರು. ಆ ಕುಶಿ, ಸಂಭ್ರಮ, ನಿಷ್ಕಲ್ಮಶ ಮನಸ್ಸಿಗೆ ಮಿತಿಯೆಯಿಲ್ಲ.

ಊರಾಗೆ ಸಿನ್ಮಾಕ್ಕೆ ಹೋಗೋದಾಗ್ಲಿ, ಹಬ್ಬಗಳಾಗ್ಲಿ, ಸಣ್ಣೋರಿದ್ದಾಗಿನ ನೆನಪುಗಳಾಗ್ಲಿ, ಗಂಗವ್ವನಂತಾ ಅದೆಷ್ಟೊ ಜೀವಗಳು ನಮ್ಮ ಸಂಭ್ರಮವನ್ನು ಹೆಚ್ಚಿಸಿದ್ರು. ಬದುಕಿನೊಳಗಿನ ಭಾವಾರ್ಥವನ್ನು ನಮಗೆ ದಯಪಾಲಿಸಿದ್ದಾರೆ. ಅದಕ್ಕಾಗಿ ನಾ ಹುಟ್ಟಿದೂರಿಗೆ ಚಿರಋಣಿ.



ಕಳೆದ ವಾರದ ‘ಚೆನ್ನುಡಿ’
‘ಧಾರ್ವಾಡ ಅಂದ್ರ...’ ಕೇಳಿ...
ನಳಿನಿ ಟಿ. ಭೀಮಪ್ಪ ಅವರ ಧ್ವನಿಯಲ್ಲಿ

ಪಾಡ್‌ಕಾಸ್ಟ್ ಕೇಳಲು
ಕ್ಯೂಆರ್ ಕೋಡ್
ಸ್ಕ್ಯಾನ್ ಮಾಡಿ.